


ನಂದಿನಿ ಹೆದ್ದುರ್ಗ

ಕಲೆ: ರೂಪಶ್ರೀ ಕಲ್ಲಿಗನೂರು


# ಪ್ರೇಮ ಪದ್ಯ

ನಿನ್ನ ಸಲುವಾದ
ಮರೆವನ್ನು
ಸಾಧಿಸಿದೆನೆಂದು
ಬರೆವಾಗಲೆಲ್ಲ
ಅಗ್ನಿಪರ್ವತವೆದ್ದ
ಸಮುದ್ರತಡಿಯ
ಕಸದಂತೆ
ತೋಪಾಡುತ್ತವೆ
ಬಡಪಾಯಿ
ಪದಗಳು

ಕರೆದು ಆಸರಕೆ
ನೀಡಿ
ನೀವು
ಹೊಮ್ಮಿಸಬೇಕಿದ್ದು
ಇದೇ ಎಂಬ
ಅಕ್ಕರೆಯೊತ್ತಡಕ್ಕೆ
ಬಳಲಿ
ಬರೆದುಕೊಳ್ಳುತ್ತಿದ್ದಂತೆ
ಕೊಳೆಯಾಗುತ್ತವೆ

ಅಕ್ಷರಗಳು
ಸಾವರಿಸಿ ಎತ್ತಿ
ಮೈತೊಳೆದು
ಮುದ್ದಿಸಿ ತುತ್ತಿಟ್ಟು
ತಿದ್ದಿಸಿ
ಎರಡೇ ಸದ್ದು
ಸಾಕು
ಮರೆತೆನೆಂಬುದ
ದಾಖಲಿಸಿಬಿಡಿ
ಎಂದರೆ ಉಸಿರುಗಟ್ಟಿ
ದುಡಿಯಹೋಗಿ
ಅಸುನೀಗುತ್ತವೆ

ಕೊಂದ ಪಾಪದ
ಹೊಣೆ ನೀಗಲು
ನೀನೆಂಬ
ಬಸಿರ
ಮತ್ತೆ ಸುಖದಲ್ಲಿ
ಹೊರುತ್ತೇನೆ

ನನ್ನ ಮೋಹಕ್ಕೆ
ಭಾರವಾದ
ನಿಟ್ಟುಸಿರು ಚೆಲ್ಲುತ್ತಿ
ನೀನು

ಅದೋ ಅಲ್ಲಿ
ಹೊಸ
ಪ್ರೇಮಕವಿತೆಗೊದಗುವ
ಖುಷಿಗೆ
ಕುಣಿಯುತ್ತವೆ ಸಾಲು

